## 6. ಪ್ರಣಬ್ ಮುಖರ್ಜಿ, ಮಾಜಿ ರಾಷ್ಟ್ರಪತಿ

ಮಿದುಳಿನ ಶಸ್ತ್ರಚಿಕಿತ್ಸೆಗೊಳಗಾಗಿ, ನಂತರ ಕೊರೋನಾದಿಂದಲೂ ಬಳಲುತ್ತಿದ್ದ ಮಾಜಿ ರಾಷ್ಟ್ರಪತಿ, ರಾಜಕೀಯ ಮುತ್ಸದ್ಧಿ ಪ್ರಣಬ್ ಮುಖರ್ಜಿ(84) ಕೊನೆಯುಸಿರೆಳೆದರು.

ನಡೆದಾಡುವ ವಿಶ್ವಕೋಶ ಬಿರುದಾಂಕಿತ, ಗೌರವಾನ್ವಿತ ರಾಜಕಾರಣಿ, ಭಾರತದ ಮಾಜಿ ರಾಷ್ಟ್ರಪತಿಯವರಾದ ಶ್ರೀ ಪ್ರಣಬ್ ಕುಮಾರ್ ಮುಖರ್ಜಿ ಅವರು ದಿನಾಂಕ:11.12.1935ರಂದು ಪಶ್ಚಿಮ ಬಂಗಾಳದ ಮಿರತಿಯಲ್ಲಿ ಜನಿಸಿದ್ದರು. ಕೋಲ್ಕತ್ತಾ ವಿಶ್ವವಿದ್ಯಾಲಯದಿಂದ ಇತಿಹಾಸ, ರಾಜಕೀಯ ಶಾಸ್ತ್ರ ಹಾಗೂ ಕಾನೂನು ಪದವಿ ಪಡೆದಿದ್ದು, ಉಪನ್ಯಾಸಕರಾಗಿ ಹಾಗೂ ಪತ್ರಕರ್ತರಾಗಿ ಕಾರ್ಯನಿರ್ವಹಿಸಿದ್ದರು. 1969ರಲ್ಲಿ ಮೊದಲ ಬಾರಿಗೆ ರಾಜ್ಯಸಭೆ ಪ್ರವೇಶಿಸಿದ್ದ ಶ್ರೀಯುತರು ನಂತರ 1975, 1981, 1993 ಮತ್ತು 1999ರಲ್ಲಿ ಪುನರಾಯ್ಕೆಗೊಂಡಿದ್ದರು. 2004ರಲ್ಲಿ ಹಾಗೂ 2009ರಲ್ಲಿ ಲೋಕಸಭೆಗೆ ಎರಡು ಬಾರಿ ಚುನಾಯಿತಗೊಂಡಿದ್ದರು. 1973 ರಿಂದ 2012ರವರೆಗಿನ ವಿವಿಧ ಅವಧಿಗಳಲ್ಲಿ ಕೈಗಾರಿಕೆ, ಹಡಗು ಮತ್ತು ಸಾರಿಗೆ, ಕಂದಾಯ ಮತ್ತು ಬ್ಯಾಂಕಿಂಗ್, ವಾಣಿಜ್ಯ, ಉಕ್ಕು ಮತ್ತು ಗಣಿ, ಹಣಕಾಸು, ವಿದೇಶಾಂಗ ವ್ಯವಹಾರಗಳು ಹಾಗೂ ರಕ್ಷಣಾ ಖಾತೆಗಳ ಸಚಿವರಾಗಿ ದೇಶ ಮೆಚ್ಚುವಂತಹ ಅಭಿವೃದ್ಧಿ ಕಾರ್ಯಗಳನ್ನು ಮಾಡಿರುತ್ತಾರೆ. 1980 ರಿಂದ 1985 ರವರೆಗೆ ರಾಜ್ಯ ಸಭೆಯ ನಾಯಕರಾಗಿ, 2004 ರಿಂದ 2012ರವರೆಗೆ ಲೋಕಸಭೆಯ ಸಭಾ ನಾಯಕರಾಗಿಯೂ ಕಾರ್ಯ ನಿರ್ವಹಿಸಿದ್ದರು. 1991 ರಿಂದ 1995ರವರೆಗೆ ಯೋಜನಾ ಆಯೋಗದ ಉಪಾಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಶ್ರೀಯುತರು 2012 ರಿಂದ 2017ರವರೆಗೆ ಭಾರತದ ರಾಷ್ಟ್ರಪತಿಗಳಾಗಿ ಸೇವೆ ಸಲ್ಲಿಸಿರುತ್ತಾರೆ. ರಾಷ್ಟ್ರದ ಅಭಿವೃದ್ಧಿ ಪಥದಲ್ಲಿ ಅಳಿಸಲಾಗದ ಗುರುತುಗಳನ್ನು ಬಿಟ್ಟಿರುವ ಶ್ರೀ ಪ್ರಣಬ್ ಅವರು ಶ್ರೇಷ್ಠ ವಿದ್ವಾಂಸರಾಗಿ ಅತ್ಯುತ್ತಮ ರಾಜಕಾರಣಿಯಾಗಿ ಸಮಾಜದ ಎಲ್ಲಾ ವರ್ಗಗಳಿಂದ ಮೆಚ್ಚುಗೆಗೆ ಪಾತ್ರರಾಗಿದ್ದರು. ರಾಷ್ಟ್ರಪತಿಗಳಾಗಿ ರಾಷ್ಟ್ರಪತಿ ಭವನದ ಅಧಿಕೃತ ಟ್ವಿಟರ್ ಖಾತೆಯನ್ನು ಪ್ರಥಮ ಬಾರಿಗೆ ತೆರೆದಿದ್ದ ಶ್ರೀಯುತರು ರಾಷ್ಟ್ರಪತಿ ಭವನದಲ್ಲಿ ಅಪರೂಪದ ವಸ್ತು ಸಂಗ್ರಹಾಲಯವನ್ನು ಪ್ರಾರಂಭಿಸಿದ್ದು ಅದರಲ್ಲಿ ರಾಷ್ಟ್ರಪತಿಗಳಿಗೆ ಲಭಿಸಿರುವ ಅಪರೂಪದ ವಸ್ತುಗಳನ್ನು ಸಂಗ್ರಹಿಸಲಾಗಿದೆ. ದೇಶದ ರಾಜಕೀಯ, ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಆರ್ಥಿಕ ಸ್ಥಿತಿಗತಿಗಳ ಬಗ್ಗೆ 10ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿರುವ ಶ್ರೀ ಪ್ರಣಬ್ ಮುಖರ್ಜಿ ಅವರು ಲೇಖಕರಾಗಿಯೂ ಪ್ರಖ್ಯಾತಿ ಗಳಿಸಿದ್ದರು. ಶ್ರೀಯುತರು ವಿವಿಧ ಕ್ಷೇತ್ರಗಳಲ್ಲಿ ಸಲ್ಲಿಸಿದ್ದ ಸೇವೆಗೆ ದೇಶ–ವಿದೇಶಗಳ ಗೌರವ ಡಾಕ್ಟರೇಟ್ ಪದವಿಗಳು, ಪದ್ಮವಿಭೂಷಣ, ಅತ್ಯುತ್ತಮ ಸಂಸದೀಯಪಟು ಹಾಗೂ 2019 ರಲ್ಲಿ 'ಭಾರತ ರತ್ನ' ಪ್ರಶಸ್ತಿಗೂ ಪುರಸ್ಕೃತರಾಗಿದ್ದರು. ಪಕ್ಷಾತೀತವಾಗಿ ಎಲ್ಲರಿಂದಲೂ ಪ್ರೀತಿ ಗೌರವಗಳನ್ನು ಪಡೆಯುತ್ತಿದ್ದ, ಭಾರತದ ರಾಜಕಾರಣದಲ್ಲಿ ಪ್ರಣಬ್ ದಾ ಎಂದೇ ಜನಜನಿತರಾಗಿದ್ದರು.

ಆಧಾರ:ವಿಜಯವಾಣಿ, ದಿನಾಂಕ:01.09.2020